ಗುಡ್ಜಿಯನ್‌ಗಿಂತ ಕೆಟ್ಟ ಮೀನು ಬೇರೇ ಯಾವ್ದೂ ಇಲ್ಲ. ಆದ್ರೆ ಅದು ಕೂಡಾ ತೂಕಾ ಹಾಕ್ದೆ ಗಾಳ ಕಚ್ಚಲ್ಲ'

'ಇದಾದ್ಮೇಲೆ ನೀನು ಮತ್ತೆ ಶಿಲಿಸ್ಪರ್ ಮೀನಿನ ಬಗ್ಗೆ ಶುರು ಮಾಡ್ತೀಯಾ ಅಲ್ವಾ?' ನ್ಯಾಯಾಧೀಶರು ಕಿರುನಗುತ್ತಾ ಹೇಳಿದರು.

'ನಿಮಗ್ಯಾಗೆ ಹೇಳ್ಬೇಕೂಂತಾನೆ ಗೊತ್ತಾಗ್ತಿಲ್ಲ... ನಮ್ಮ ನದಿಗಳಲ್ಲಿ ಶಿಲಿಸ್ಪರ್ ಮೀನು ಸಿಗಲ್ಲ... ಸುಮ್‌ಸುಮ್ನೆ ಶಿಲಿಸ್ಪರ್ ಅಂದ್ರೆ? ಗಾಳಕ್ಕೆ ಎರೇನೋ, ಚಿಟ್ಟೇನೋ ಹಾಕಿ ನೀರಿನ ಮೇಲೇನೇ ತೂಕ ಇಲ್ದೆ ಹಾಕಿದ್ರೆ ಮುಲ್ಲೆಟ್ಟೋ ಪಲ್ಲೆಟ್ಟೋ ಸಿಗಬೋದು... ಆದ್ರೂ ಅದು ತುಂಬಾ ಅಪರೂಪ...'

'ಮುಚ್ಚಯ್ಯಾ ಬಾಯಿ. ಸುಮ್ನೆ ಏನೋ ಹರಟ್ತಾನೇ ಇರ್ತಾನೆ'

ಡೆನಿಸ್ ಸುಮ್ಮನಾಗ್ತಾನೆ. ಸ್ವಲ್ಪ ಹೊತ್ತು ಅಲ್ಲಿ ಮೌನ ಆವರಿಸುತ್ತೆ. ಡೆನಿಸ್ ಒಂದು ಕಾಲಿನಿಂದ ಇನ್ನೊಂದು ಕಾಲಿನ ಮೇಲೆ ಭಾರ ಊರಿ ನಿಂತ ಭಂಗಿಯನ್ನ ಬದಲಿಸಿ ಸುತ್ತಾ ನೋಡ್ತಾನೆ. ನ್ಯಾಯಾಧೀಶರ ಎದುರಿನ ಮೇಜಿನ ಮೇಲೆ ಹರಡಿದ್ದ ಹಸಿರು ಬಟ್ಟೆ ನೋಡ್ತಿದ್ದಾಗ ಅದ್ಯಾಕೋ ಅವನಿಗೆ ಸೂರ್ಯನ ಬಿಸಿಲು ಕಣ್ಣ ಮೇಲೆ ಬಿದ್ದ ಹಾಗೆ ಆಗಿ ಮೇಲಿಂದ ಮೇಲೆ ಕಣ್ಣರೆಪ್ಪೆ ಮಿಟುಕಿಸಿ ಉಜ್ಜಿಕೊಳ್ಳುತ್ತಾನೆ. ನ್ಯಾಯಾಧೀಶರು ತಮ್ಮೆದುರು ಇರುವ ಕಾಗದಗಳ ಮೇಲೆ ಏನೋ ಪರಪರ ಬರೆಯುತ್ತಿರುತ್ತಾರೆ.

'ನಾನೋಗ್ಬೋದಾ?' ತುಂಬಾ ಕಾಲ ಇದ್ದ ಮೌನವನ್ನು ತಡೆಯಲಾರದೆ ಡೆನಿಸ್ ಕೇಳೇ ಬಿಡುತ್ತಾನೆ.

'ಇಲ್ಲ. ನಿನ್ನ ಕಾವಲಿನಲ್ಲಿ ಇಟ್ಟು ಜೈಲಿಗೆ ಕಳಿಸಲೇಬೇಕು.'

ಮೈಬಗ್ಗಿಸಿಕೊಂಡು ಕಣ್ಣು ಪಿಳುಕಿಸುತ್ತಿದ್ದ ಡೆನಿಸ್ ತಟಕ್ ಎಂದು ನೆಟ್ಟಗಾಗಿ, ಹುಬ್ಬುಗಳನ್ನು ಎತ್ತಿ, ನ್ಯಾಯಾಧೀಶರನ್ನು ಪರೀಕ್ಷಿಸುವವನಂತೆ ದಿಟ್ಟಿಸುತ್ತಾನೆ.

'ಜೈಲಿಗಾ? ಏನ್ಸಾಮಿ ನೀವೇಳೇದು? ನನ್‌ಗೆ ಅದಿಕ್ಕೆಲ್ಲಾ ಟೇಮಿಲ್ಲ. ಈಗ ಸಂತೇಗೋಗ್ಬೇಕು. ಯೆಗೋರ್‌ನಿಂದ ಮೂರು ರೂಬಲ್ ಸಾಲ ಇಸ್ಕೊಂಡ್ಬರ್ಬೇಕು. ಸ್ವಲ್ಪ ಕೆಲ್ಸ ಇದೆ...!'

'ಮುಚ್ಚಯ್ಯಾ ಬಾಯಿ! ಮಧ್ಯ ಮಾತಾಡ್ಬೇಡ'

'ಜೈಲಿಗೆ... ಅಲ್ಲಾ ಸ್ವಾಮಿ ಏನಾದ್ರೂ ತಪ್ಪು, ಕೆಟ್ ಕೆಲ್ಸ ಮಾಡಿದ್ರೆ ಜೈಲಿಗೆ ಓಗೋದ್ ಸರಿ. ಏನೂ ಮಾಡ್ದೆ, ಜೈಲು ಪೈಲು ಅಂದ್ರೇಗೆ ಸ್ವಾಮಿ? ನಾನೇನು ಕಳ್ತನ ಮಾಡಿದ್ದೀನ, ಕೊಲೆ ಮಾಡಿದ್ದೀನ... ನಾನು ಬೀದೀ ಜಗ್ಳಕ್ಕೂ ಓಗೋವ್ನಲ್ಲ..., ನಂದೇನಾದ್ರೂ ಸಾಲಸೋಲ ಇರೋದಿದ್ರೆ ಅದ್ರ ಬಗ್ಗೆ ನಮ್ಮ ದಲ್ಲಾಳೀನ ಕೇಳಿ... ನಮ್ಮಣ್ಣನ ಮಾತು ಕೇಳಬೇಡಿ... ನಿಮಗೊತ್ತಲ್ಲ ನಮ್ಮಣ್ಣ ಹೇಗಂತ...'

'ಮುಚ್ಚಯ್ಯಾ ಬಾಯಿ. ಹೇಳ್ಲಿಲ್ವಾ?'

'ನಾನು ಮುಚ್ಕೊಂಡೇ ಇದ್ದೀನಿ' ಡೆನಿಸ್ ಗೊಣಗಿದ. 'ಆ ನಮ್ಮಣ್ಣ ನನ್ ಕೈಗಡದ ಬಗ್ಗೆ ಅಪ್ರಿವ್ರತ್ರ ಸುಳ್ಳುಪಳ್ಳು ಹೇಳ್ತಾನೇ ಇರ್ತಾನೆ, ನಾನು ಪ್ರಮಾಣ ಮಾಡಿ ಏಳ್ತೀನಿ... ನಾವು ಮೂರ್ಜನ ಅಣ್ತಂಮ್ಮದ್ರು: ಕುಝ್ಮಾ ಗ್ರಿಗೋರ್ಯೆವ್, ಆಮೇಲೆ ಎಗೋರ್ ಗ್ರಿಗೋರ್ಯೆವ್ ಆಮೇಲೆ ನಾನು, ಡೆನಿಸ್ ಗ್ರಿಗೋರ್ಯೆವ್.'

'ನನ್ನ ಕೆಲಸ ಮಾಡಕ್ಕೂ ಬಿಡ್ತಿಲ್ವಲ್ಲಾ ನೀನು... ಸುಮ್ನಿರಯ್ಯಾ... ಏಯ್ ಸೈಮನ್' ನ್ಯಾಯಾಧೀಶರು ಕೂಗಿಯೇ ಬಿಟ್ಟರು, 'ಎಳ್ಕೊಂಡ್ಹೋಗೊ ಇವನ್ನ!'

'ನಾವು ಮೂರು ಜನ ಅಣ್ತಂಮ್ಮಂದಿರು'. ಇಬ್ಬರು ಸೈನಿಕರು ಬಂದು ಡೆನಿಸ್‌ನನ್ನ ಹೊರಗೆಳೆದೊಯ್ಯುವಾಗಲೂ ಅವನು ಗೊಣಗುತ್ತಲೇ ಇದ್ದ. 'ಯಾರೂ ಒಬ್ರಿಗೊಬ್ರು ಆಗಲ್ಲ. ಆ ಕುಝ್ಮಾ ದುಡ್ ಕೊಡಲ್ಲ, ಅದ್ಕೆ ಎಲ್ಲಾ ಬಂದು ನನ್ನ, ಡೆನಿಸ್ ಕೊಡು ಕೊಡು ಅಂತ ಹಿಡ್ಕೊಂತಾರೆ... ಇಲ್ನೋಡಿದ್ರೆ ಈ ನ್ಯಾಯಾಧೀಶರು ನನ್ನ ಸುಮ್‌ಸುಮ್ನೆ ಜೈಲಿಗೆ ಕಳಿಸ್ತಿದ್ದಾರೆ! ನಮ್ಮ ದೇವ್ರು ಸತ್ತೋಗಿರ್ಬೇಕು! ಅವನೇ ನಿಜವಾದ ನ್ಯಾಯಧೀಶ. ನಿಮಗೂ ಅವನೇ ಸರಿಯಾದ ನ್ಯಾಯ ಕೊಡ್ತಾನೆ. ಅಲ್ಲ ನೀವು ನ್ಯಾಯ ಹೇಳಬೇಕಾದರೆ ವಿವೇಚನೆ ಇಟ್ಕೋಬೇಕು. ನಿಮಗ್ ಹೇಗ್ ತೋಚತ್ತೋ ಹಾಗಲ್ಲ. ಬೇಕಾದ್ರೆ ನಾಲ್ಕೇಟು ಹಾಕಿ ಸ್ವಾಮಿ. ಆದ್ರೆ ಯಾಕೆ ಏಟು ಹಾಕಬೇಕು, ಯಾರಿಗೆ ಹೊಡೆಯಬೇಕು ಅಂತ ಯೋಚ್ನೆ ಮಾಡಿ ಹೊಡೀರಿ... ಸುಮ್‌ಸುಮ್ನೆ ಹೊಡೆಯೋದಂದ್ರೇನು...?'

●